ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ

ಸಿ.ಸಿ.ನಂ.74/2025

ಫಿರ್ಯಾದಿದಾರರು : ಅಂದಾಪ್ಪ ತಂದೆ ದಾನಪ್ಪ ಮದ್ದೂರ
ವಯಾಃ 38 ವರ್ಷ, ಉದ್ಯೋಗಃ ಶೇತ್ಕಿ
ಸಾಃತಿರ್ಲಾಪೂರ ತಾಃ ನವಲಗುಂದ ಜಿಃ ಧಾರವಾಡ

ವಿರುದ್ಧ

ಆರೋಪಿತರು : ಶ್ರೀಮತಿ ಕಮಲವ್ವ ಕೋಂ ಬಸಯ್ಯ ಮಠಪತಿ
ವಯಾಃ 32 ವರ್ಷ, ಉದ್ಯೋಗಃ ಶೇತ್ಕಿ
ಸಾಃತಿರ್ಲಾಪೂರ ತಾಃ ನವಲಗುಂದ ಜಿಃ ಧಾರವಾಡ

ಆಪಾದನೆ

ಆರೋಪಿಯಾದ ನೀವು ನಿಮ್ಮ ಮನೆತನ ಅಡಚಣೆ ಹಾಗೂ ಜಾಗೆಯನ್ನು ಖರೀದಿಸುವ ಸಲುವಾಗಿ ಹಣದ ಅವಶ್ಯಕತೆ ಇದ್ದುದ್ದರಿಂದ ಫಿರ್ಯಾದಿ ಅಂದಾಪ್ಪ ತಂದೆ ದಾನಪ್ಪ ಮದ್ದೂರ ಇವರಲ್ಲಿ ಕೇಳಿಕೊಂಡಾಗ ದಿನಾಂಕಃ 13.09.2024 ರಂದು ರೂ.2,00,000/-(ಎರಡು ಲಕ್ಷ ರೂಪಾಯಿಗಳು ಮಾತ್ರ) ಹಣವನ್ನು ಕೈಗಡ ಸಾಲ ಅಂತಾ ನಿಮಗೆ ಕೊಟ್ಟಿದ್ದು ಇರುತ್ತದೆ. ನಂತರ ನೀವು ಸದರಿ ಹಣವನ್ನು ಫಿರ್ಯಾದಿದಾರನಿಗೆ ಒಂದು ಎರಡು ತಿಂಗಳ ಒಳಗಾಗಿ ಯಾವುದೇ ತಂಟೆ ತಕರಾರು ಮಾಡದೇ ಹಣ ಹಿಂದಿರುಗಿಸುತ್ತೇನೆ ಅಂತಾ ಒಪ್ಪಿಕೊಂಡಿದ್ದು ಇರುತ್ತದೆ.

ನಂತರ ಫಿರ್ಯಾದಿರವರು ನೀವು ಅವರಿಂದ ಪಡೆದುಕೊಂಡಿದ್ದ ಒಟ್ಟು ರೂ.2,00,000/- ಗಳನ್ನು ಮರಳಿ ಕೊಡುವಂತೆ ಕೇಳಲು ನೀವು ಇಂದು ಕೊಡುತ್ತೇನೆ ನಾಳೆ ಕೊಡುತ್ತೇನೆ ಅಂತಾ ದಿನಮೇಕ್ ಮಾಡುತ್ತಾ ಬಂದಿದ್ದು ಅಲ್ಲದೇ ಕೊನೆಗೆ ನೀವು ದಿನಾಂಕಃ 13.09.2024 ರಂದು ನೀವು ಖಾತೆ ಹೊಂದಿದ ಕರ್ನಾಟಕ ಗ್ರಾಮೀಣ ಬ್ಯಾಂಕ ತಿರ್ಲಾಪೂರ ಶಾಖೆ ಇವರ ಚೆಕ್ ಸಂಖ್ಯೆಃ 024320 ನೇದ್ದನ್ನು ಫಿರ್ಯಾದಿಗೆ ನೀಡಿದ್ದು ಇರುತ್ತದೆ.

ಆನಂತರ ಫಿರ್ಯಾದಿರವರು ನೀವು ಕೊಟ್ಟ ಮೇಲ್ಕಾಣಿಸಿದ ಚೆಕ್‌ನ್ನು ದಿನಾಂಕಃ 21.10.2024 ರಂದು ನಗದೀಕರಣಗೊಳಿಸಿಕೊಳ್ಳಲು ತಾನು ಖಾತೆ ಹೊಂದಿದ ಸ್ಟೇಟ ಬ್ಯಾಂಕ ಆಫ್ ಇಂಡಿಯಾ ನವಲಗುಂದ ಶಾಖೆ ಇವರಲ್ಲಿ ನಗದೀಕರಣಕ್ಕೆ ಸಲ್ಲಿಸಿದ್ದು ಸದರಿ ಚೆಕ್ಕು ನಗದೀಕರಣವಾಗದೇ, ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ (Funds Insufficient) ಅಂತಾ ಕಾರಣ ಕಾಣಿಸಿ ಚೆಕ್ ಅಮಾನ್ಯವಾಗಿ ಬ್ಯಾಂಕ್ ಅಧಿಕಾರಿಗಳ ಹಿಂಬರಹದೊಂದಿಗೆ ದಿನಾಂಕಃ22.10.2024 ರಂದು ನಗದೀಕರಣಗೊಳ್ಳದೇ ಮರಳಿ ಬಂದಿರುತ್ತದೆ. ನಂತರ ದಿನಾಂಕಃ30.10.2024 ರಂದು ಫಿರ್ಯಾದಿದಾರರು ತನ್ನ ವಕೀಲರ ಮೂಲಕ ಚೆಕ್ಕು ಅಮಾನ್ಯವಾದ ಕುರಿತು ನೊಂದಾಯಿತ ಅಂಚೆ ಮೂಲಕ ನೋಟಿಸ್‌ನ್ನು ನಿಮಗೆ ನೀಡಿದ್ದು, ಅದನ್ನು

ನೀವು ಪಡೆದುಕೊಳ್ಳದೆ, Party out of Station ಅಂತಾ ದಿನಾಂಕಃ05.11.2024 ರಂದು ಸದರಿ ನೋಟಿಸ್ ಮರಳಿ ಬಂದಿರುತ್ತದೆ ಮತ್ತು ನೀವು ಆರೋಪಿತರು ಫಿರ್ಯಾದಿಯವರಿಗೆ ಇಲ್ಲಿಯವರಗೆ ಕೊಡಬೇಕಾದ ಚೆಕ್ಕಿನ ಹಣವನ್ನು ನೀಡಿರುವುದಿಲ್ಲಾ. ಆದ್ದರಿಂದ ನೀವು ಕಲಂ.138 ಎನ್.ಆಯ್ ಆ್ಯಕ್ಟ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಅಧಿಕಾರದ ವ್ಯಾಪ್ತಿಯಲ್ಲಿ ಎಸಗಿರುವುದಾಗಿ ಆರೋಪಿಸುತ್ತೇನೆ.

ಪ್ರಶ್ನೆ.**1:** ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ ?

ಉತ್ತರಃ

ಪ್ರಶ್ನೆ.**2:** ಆಪಾದನೆಯನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೋ ?

ಉತ್ತರಃ

**(ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ ಉತ್ತರ ಪಡೆದು ಬಹಿರಂಗ ನ್ಯಾಯಾಲಯದಲ್ಲಿ ನಮೂದು ಮಾಡಲಾಯಿತು)**

ನವಲಗುಂದ.
ದಿನಾಂಕಃ 03.12.2025

**(ನವೀನ್ ಎಫ್. ಡಿಸೋಜಾ)**
ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನವಲಗುಂದ.